**ದಿನಾಂಕಃ 18/08/2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ – ಶ್ರೀ ಎಂ ಎ ಎಂ ವಕೀಲರಿಂದ ಪ್ರತಿವಾದಿ ನಂಃ 3 ರಿಂದ 6 ರವರ ಪರವಾಗಿ–**

3. ದಾವಾ ಆಸ್ತಿ ಒಟ್ಟು ಜಮೀನು ಕ್ಷೇತ್ರ 6 ಎಕರೆ 36 ಗುಂಟೆ ಇರುತ್ತದೆ. ನಾನು ದಾವೆ ದಾಖಲಿಸಿದ ಕಾಲಕ್ಕೆ ದಾವಾ ಜಮೀನಿನಲ್ಲಿ 3 ಪಟ್ಟಿಗಳು ಆಗಿರುತ್ತವೆ ಎಂದರೆ ಸರಿಯಲ್ಲ. ಸರ್ವೆ ನಂ. 14 ರಲ್ಲಿ 14/4 ಕ್ಷೇತ್ರ 3 ಎಕರೆ 19 ಗುಂಟೆ, 14/5 ಕ್ಷೇತ್ರ 1 ಎಕರೆ 14 ಗುಂಟೆ ಮತ್ತು 14/6 ಕ್ಷೇತ್ರ 2 ಎಕರೆ 3 ಗುಂಟೆ ಅಂತಾ 3 ಪಟ್ಟಿಗಳು ಆಗಿರುತ್ತವೆ ಎಂದು ದಾವೆಯಲ್ಲಿ ಕಾಣಿಸಿರುತ್ತೇವೆ ಎಂದರೆ ಸರಿ. ದಾವೆ ದಾಖಲಿಸುವ ಕಾಲಕ್ಕೆ ಸರ್ವೆ ನಂ. 14/5 ಕ್ಷೇತ್ರ 1 ಎಕರೆ 14 ಗುಂಟೆ ಮತ್ತು 14/6 ಕ್ಷೇತ್ರ 2 ಎಕರೆ 3 ಗುಂಟೆ ಜಮೀನು ನನ್ನ ಹೆಸರಿನಲ್ಲಿ ಇರಲ್ಲಿಲ್ಲಾ ಎಂದರೆ ಸರಿ. ಸಾಕ್ಷಿ ಮುಂದುವರೆದು ನನ್ನ ಹೆಸರಿನಲ್ಲಿ ಇಲ್ಲದ ಕಾರಣಕ್ಕೆ ಈ ದಾವೆಯನ್ನು ದಾಖಲಿಸಿರುತ್ತಾರೆ ಎಂದು ನುಡಿಯುತ್ತಾರೆ.

4. ಈ 32 ವರ್ಷಗಳ ಹಿಂದೆ 1991 ರಲ್ಲಿ ನಾನೇ ಸ್ವತಹ ಸರ್ವೆ ನಂ. 14/4 ಬಿ ಕ್ಷೇತ್ರ 3 ಎಕರೆ 19 ಗುಂಟೆ ಜಮೀನು ವಾಟ್ನಿ ಪತ್ರ ಬರಿಸಿ 1 ನೇ ಪ್ರತಿವಾದಿಗೆ

ಬಿಟ್ಟುಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಸದರಿ ವಾಟ್ನಿ ಪತ್ರದ ಪ್ರಕಾರ ಸರ್ವೆ ನಂ 14/4 ಎ ಕ್ಷೇತ್ರ 3 ಎಕರೆ 17 ಗುಂಟೆ ಜಮೀನನ್ನು ನನ್ನ ಹೆಸರಿಗೆ ಇರುತ್ತದೆ ಎಂದರೆ ಸರಿ. ವಾಟ್ನಿ ಪ್ರಕಾರ ತಲಾಟಿಯವರಿಗೆ ವರದಿ ಸಲ್ಲಿಸಿದೆ ಎಂದರೆ ಸರಿಯಲ್ಲ. ಆಗ ತಲಾಟಿಯವರು ನನಗೆ ಮತ್ತು 1 ನೇ ಪ್ರತಿವಾದಿಗೆ ಯೂ ಫಾರ್ಮ ನೋಟಿಸು ಕೊಟ್ಟದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಆ ಸಮಯದಲ್ಲಿ ನಾನು ಊರಲ್ಲಿ ಇರಲ್ಲಿಲ್ಲಾ ಎಂದು ನುಡಿದಿರುತ್ತಾರೆ. ಯೂ ಫಾರ್ಮ ನೋಟಿಸಿಗೆ ಉತ್ತರ ನೀಡಿದೇ ಇದ್ದ ಕಾರಣ ತಲಾಟಿಯವರು ವಾಟ್ನಿ ಪ್ರಕಾರ ಎಂ.ಇ. 614 ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಿಃ 05.06.1991 ರಲ್ಲಿ ಎಂ.ಇ. 614 ನ್ನು ಕಂದಾಯ ಇಲಾಖೆಯವರು ದೃಢಿಕರಿಸಿರುತ್ತಾರೆ ಎಂದರೆ ಸರಿಯಲ್ಲ. ಇವತ್ತಿನವರೆಗೂ 3 ಎಕರೆ 17 ಗುಂಟೆ ಜಮೀನನ್ನು ಸ್ವಾಧಿನಾಬೊಗದಲ್ಲಿ ಇರುತ್ತೇನೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಾನು 1 ನೇ ಪ್ರತಿವಾದಿಗೆ ಕೊಟ್ಟಿಲ್ಲ ಎಂದು ನುಡಿದಿರುತ್ತಾರೆ. ವಾಟ್ನಿಯಾದ ವಿಷಯ ನನಗೆ 1991 ನೇ ಇಸ್ವಿಯಿಂದ ಗೊತ್ತಿರುತ್ತದೆ ಎಂದರೆ ಸರಿಯಲ್ಲ. ವಾಟ್ನಿಯಾದ ವಿಷಯ ನನಗೆ 1991 ನೇ ಇಸ್ವಿಯಲ್ಲಿ ಗೊತ್ತಿದ್ದರು ಸಹ ನಾನು ಇಲ್ಲ ಅಂತಾ ಹೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

5. ನಾನು ವಾಟ್ನಿ ಪತ್ರಕ್ಕೆ ಮತ್ತು ಯೂ ಫಾರ್ಮಗೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ಗಂಡ ಸೊಸೈಟಿಯಲ್ಲಿ ಕಡಿಮೆ ಬಡ್ಡಿಯ ದರದಹಾಗೆ

ಸಾಲ ಕೊಡಿಸುತ್ತೇನೆ ಅಂತಾ ಹೇಳಿ ಖಾಲಿ ಬಾಂಡ ಪೇಪರ ಮೇಲೆ ಸಹಿ ಪಡೆದುಕೊಂಡಿರುತ್ತಾನೆ ಅಂತಾ ಹೇಳಿ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಎಲ್ಲಾ ವಿಷಯ ಗೊತ್ತಿದ್ದರು ಸಹ 4 ಮತ್ತು 5 ನೇ ಪ್ರತಿವಾದಿಯರಿಂದ ಬೇ ಕಾಯ್ದೆಶೀರಿಯಿಂದ ಕಿತ್ತುಕೊಳ್ಳುವ ಉದ್ದೇಶದಿಂದ ಮತ್ತು ಅವರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

6. 3 ಎಕರೆ 19 ಗುಂಟೆ ಜಮೀನನ್ನು 1 ನೇ ಪ್ರತಿವಾದಿ ತನ್ನ ಗಂಡ 2 ನೇ ಪ್ರತಿವಾದಿಗೆ 1993 ರಲ್ಲಿ ಹಕ್ಕು ಬಿಟ್ಟುಕೊಟ್ಟಿರುತ್ತಾಳೆ ಎಂದರೆ ಸರಿಯಲ್ಲ. 1993 ನೇ ಇಸ್ವಿಯಿಂದ 2 ನೇ ಪ್ರತಿವಾದಿಯು 3 ಎಕರೆ 19 ಗುಂಟೆ ಜಮೀನು ಆತನ ಹೆಸರಿನಿಂದ ಇರುತ್ತದೆ ಎಂದರೆ ಸರಿಯಲ್ಲ. 1994 ನೇ ಇಸ್ವಿಯಲ್ಲಿ 2 ನೇ ಪ್ರತಿವಾದಿ 3 ಎಕರೆ 19 ಗುಂಟೆ ಜಮೀನಿನಲ್ಲಿ 2 ಎಕರೆ 3 ಗುಂಟೆ ಜಮೀನನ್ನು 3 ನೇ ಪ್ರತಿವಾದಿಯ ಗಂಡ ಮತ್ತು 4 ರಿಂದ 6 ನೇ ಪ್ರತಿವಾದಿಯ ತಂದೆಗೆ ದಿಃ 12.09.1994 ರಂದು ರೂ. 21,000/- ಗಳಿಗೆ ಮಾರಾಟ ಮಾಡಿರುತ್ತಾನೆ ಎಂದರೆ ಸರಿಯಲ್ಲ. ಈ ವಿಷಯ ನನಗೆ ಗೊತ್ತಿದ್ದರು ಸಹ ನಾನು ಇಲ್ಲ ಅಂತಾ ಹೇಳಿ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 1994 ನೇ ಇಸ್ವಿಯಿಂದ 1 ನೇ ಪ್ರತಿವಾದಿ ಗಂಡ ಮೃತಪಡುವವರೆಗೆ 2 ಎಕರೆ 3 ಗುಂಟೆ ಜಮೀನು ಆತನ ಸ್ವಾಧಿನ

ಅನುಭೋಗದಲ್ಲಿ ಇತ್ತು ಎಂದರೆ ಸರಿಯಲ್ಲ. ಮಲ್ಲಣ್ಣ ಮೃತಪಟ್ಟ ನಂತರ ಆತನ ವಾರಸುದಾರರು ಆದ 3 ರಿಂದ 6 ನೇ ಪ್ರತಿವಾದಿಯರು 2 ಎಕರೆ 3 ಗುಂಟೆ ಜಮೀನಿನ ಇವತ್ತಿನವರೆಗೂ ಸ್ವಾಧಿನ ಅನುಭೋಗದಲ್ಲಿ ಇರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಈ ಎಲ್ಲಾ ವಿಷಯ ನನಗೆ ಗೊತ್ತಿದ್ದರು ಸಹ ನಾನು ಇಲ್ಲ ಅಂತಾ ಹೇಳಿ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

7. 1 ಎಕರೆ 14 ಗುಂಟೆ ಜಮೀನು 2 ನೇ ಪ್ರತಿವಾದಿಯ ಹೆಸರಿನಲ್ಲಿ ಇತ್ತು ಎಂದರೆ ಸರಿಯಲ್ಲ. ಉಳಿದ 1 ಎಕರೆ 14 ಗುಂಟೆ ಜಮೀನು 2 ನೇ ಪ್ರತಿವಾದಿ 5 ನೇ ಪ್ರತಿವಾದಿಗೆ ದಿಃ 09.02.1996 ರಂದು ರೂ. 13,000/- ಗಳಿಗೆ ನೊಂದಾಯಿತ ಖರೀದಿ ಪತ್ರ ಮೂಲಕ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಖರೀದಿ ಮಾಡಿದ ದಿನದಿಂದ ಇವತ್ತಿನವರೆಗೂ 5 ನೇ ಪ್ರತಿವಾದಿಯ 1 ಎಕರೆ 14 ಗುಂಟೆ ಜಮೀನಿನ ಸ್ವಾಧಿನ ಅನುಭೋಗದಲ್ಲಿ ಇರುತ್ತಾನೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಲಾಯಿತು.

(ತೆ ನ್ಯಾ ನನ್ನ ಹೇ ಬೆ ಮಾಡಲಾಗಿದೆ)

ನನ್ನ ಸಮಕ್ಷಮ,

ಓ.ಹೇ.ಕೇ.ಸರಿ.ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ. ಮುದ್ದೇಬಿಹಾಳ